# ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಸಿ5[1]ಪ್ರದಸ:ಬಡ್ತಿ:02/2014-15

ದಿನಾಂಕ:29-06-2015

## : ಜ್ಞಾಪನ :

**ವಿಷಯ:** ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ದ್ವಿ.ದ.ಸಹಾಯಕರು ಹಾಗೂ ದ್ವಿ.ದ.ಸಹಾಯಕರು ಸಹಿತ ಬೆರಳಚ್ಚುಗಾರರಿಗೆ ಪ್ರ.ದ.ಸಹಾಯಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡುವ ಬಗ್ಗೆ.

**ಉಲ್ಲೇಖ:** ದಿನಾಂಕ:02-02-2015ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡಾವಳಿ.

2. ಈ ಕಛೇರಿ ಜ್ಞಾಪನ ಸಮ ಸಂಖ್ಯೆ ದಿನಾಂಕ:06-02-2015 ಮತ್ತು 13-02-2015
3. ಸರ್ಕಾರದ ಪತ್ರ ಸಂಖ್ಯೆ:ಇಡಿ 121 ಎಲ್‌ಐಬಿ 2015 ದಿನಾಂಕ:22-06-2015

ಉಲ್ಲೇಖ(1)ರ ಇಲಾಖಾ ಮುಂಬಡ್ತಿ ನಡಾವಳಿಯಂತೆ, ಉಲ್ಲೇಖ(2)ರ ಈ ಕಛೇರಿ ಜ್ಞಾಪನದಲ್ಲಿ ದ್ವಿತೀಯ ದರ್ಜೆ ಸಹಾಯಕರು / ದ್ವಿ.ದ.ಸ ಸಹಿತ ಬೆರಳಚ್ಚುಗಾರರಿಂದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಸ್ಥಾನಾಪನ್ನ ಬಡ್ತಿ ನೀಡಲಾಗಿರುವ ಅಭ್ಯರ್ಥಿಗಳು ದಿನಾಂಕ:18-02-2015ರಂದು ಸ್ಥಳ ಆಯ್ಕೆ ಪ್ರಕ್ರಿಯೆಗೆ ಹಾಜರಾಗಲು ಸೂಚಿಸಲಾಗಿತ್ತು.

ಉಲ್ಲೇಖ(2)ರ ದಿನಾಂಕ:13-2-2015ರ ಈ ಕಛೇರಿ ಜ್ಞಾಪನದಲ್ಲಿ ಸ್ಥಳ ಆಯ್ಕೆ ಪ್ರಕ್ರಿಯೆಯನ್ನು ಮುಂದೂಡಿ, ಸ್ಥಳ ಆಯ್ಕೆ ಪ್ರಕ್ರಿಯೆ ಬಗ್ಗೆ ಸರ್ಕಾರದ ನಿರ್ದೇಶನ ಕೋರಲಾಗಿತ್ತು.

ಉಲ್ಲೇಖ (3)ರಲ್ಲಿನ ಸರ್ಕಾರದ ನಿರ್ದೇಶನದನ್ವಯ ದ್ವಿತೀಯ ದರ್ಜೆ ಸಹಾಯಕ / ದ್ವಿ.ದ.ಸ ಸಹಿತ ಬೆರಳಚ್ಚುಗಾರರ ವೃಂದದದಿಂದ ಪ್ರಥಮ ದರ್ಜೆ ಸಹಾಯಕರ ವೃಂದಕ್ಕೆ ಈ ಕಛೇರಿ ಜ್ಞಾಪನ ದಿನಾಂಕ:6-2-2015ರಲ್ಲಿ ಬಡ್ತಿ ನೀಡಿರುವ ನೌಕರರುಗಳು ದಿನಾಂಕ:04-07-2015ರ ಬೆಳಿಗ್ಗೆ 11-00 ಗಂಟೆಗೆ ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ.ರಸ್ತೆ, ಬೆಂಗಳೂರು ಇಲ್ಲಿ ನಡೆಯುವ ಸ್ಥಳ ಆಯ್ಕೆ ಪ್ರಕ್ರಿಯೆಗೆ ಖುದ್ದಾಗಿ ಹಾಜರಾಗಿ, ಸ್ಥಳ ಆಯ್ಕೆ ಮಾಡಿಕೊಳ್ಳಲು ಸೂಚಿಸಿದೆ. ಗೈರು ಹಾಜರಾಗುವ ಅಭ್ಯರ್ಥಿಗಳಿಗೆ ಈ ಕಛೇರಿಯಿಂದ ಏಕಪಕ್ಷೀಯವಾಗಿ ಸ್ಥಳ ನಿಯುಕ್ತಿಗೊಳಿಸಿ ಆದೇಶ ಹೊರಡಿಸಲಾಗುವುದು.

29/6/15

[ಕೆ.ಎಸ್.ಸತ್ಯಮೂರ್ತಿ]
ಆಯುಕ್ತರು

ಇವರಿಗೆ:

1. ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಎಲ್ಲಾ ನಿರ್ದೇಶಕರುಗಳಿಗೆ
2. ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಎಲ್ಲಾ ಸಹನಿರ್ದೇಶಕರುಗಳಿಗೆ
3. ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು[ಆಡಳಿತ] / [ಅಭಿವೃದ್ಧಿ]
4. ಮಾನ್ಯ ಆಯುಕ್ತರ ಆಪ್ತ ಶಾಖೆಗೆ ಮಾಹಿತಿಗಾಗಿ.
5. ಮಾನ್ಯ ಜಂಟಿ ಆಯುಕ್ತರು[ಆಡಳಿತ] ರವರ ಆಪ್ತ ಶಾಖೆಗೆ ಮಾಹಿತಿಗಾಗಿ.
6. ಸಂಬಂಧಿಸಿದ ಶಾಲಾ : ಕಾಲೇಜು : ಕಛೇರಿ ಮುಖ್ಯಸ್ಥರುಗಳಿಗೆ ಮುಂದಿನ ಕ್ರಮಕ್ಕಾಗಿ.
7. ಸಂಬಂಧಿಸಿದ ನೌಕರರುಗಳಿಗೆ
8. ಕಛೇರಿ ಜ್ಞಾಪನಾ ಕಡತ
9. ಕಛೇರಿ ಪ್ರತಿ.